**ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ನ್ಯಾಯಾಲಯ, ಕನಕಪುರ .**

ಸಿಸಿಃ **11/2010**

ಸಿಡಬ್ಲೂಃ **2**

ಪಿಡಬ್ಲೂ ಃ**2**

ಹೆಸರು : ಬಿ.ಕೆ ನಟರಾಜು

ತಂದೆ ಹೆಸರು : ಬಿ. ಕಂಬಯ್ಯ

ವಯಸ್ಸು : **57** ವರ್ಷ

ಉದ್ಯೋಗ : ಸಹಾಯಕ ಕಾರ್ಯಪಾಲಕ ಅಭಿಯೋಜಕರು

ಜಂಟಿ ನಿರ್ದೇಶನ ಕಚೇರಿ, ಭೂ ಮತ್ತು ಗಣಿ ಇಲಾಖೆ, ದಕ್ಷಿಣ ವಲಯ

ಮೈಸೂರು

ವಾಸ : ಮೈಸೂರು

ದಿನಾಂಕಃ**-12.02.2026** ರಂದು ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

<u>ದಂಡ ಪ್ರಕ್ರಿಯಾ ಸಂಹಿತೆ **299** ರಡಿಯಲ್ಲಿ ಮುಖ್ಯ ವಿಚಾರಣೆ ಎಪಿಪಿ ಅವರಿಂದ</u>

**ನನ್ನನ್ನು 2006 ರಲ್ಲಿ ದಕ್ಷಿಣ ವಲಯ ಮೈಸೂರು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಕನಕಪುರದ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಡೆಪ್ಯೂಟೇಷನ್ ಮೂಲಕ ನನ್ನ ಕರ್ತವ್ಯವನ್ನು ನಿರ್ವಹಿಸಲು ಆದೇಶ ಮಾಡಿದ್ದರು. ಅದರಂತೆ ಮಾರ್ಚ 2006 ರಿಂದ ಜೂನ್ 2006 ರವರೆಗೂ ನನ್ನ ಕರ್ತವ್ಯ ನಿರ್ವಹಿಸುತ್ತಿದ್ದೇನೆ.**

ಆರೋಪಿಯ ಬಗ್ಗೆ ಗೊತ್ತಿಲ್ಲ. ಚಾಸಾ**-1,** ಚಾಸಾ**-3** ರಿಂದ ಚಾಸಾ**-11** ರವರು ಗೊತ್ತಿರುತ್ತಾರೆ.

ದಿಃ**02.05.2006** ರಂದು ಚಾಸಾ**-10** ರವರ ನೇತೃತ್ವದ ತಂಡದಲ್ಲಿ ನಾನು ಕೂಡ ಇದ್ದು ಅದರಂತೆ ಅಕ್ರಮವಾಗಿ ಗಣಿಗಾರಿಕೆ ಮಾಡಿರುವ ಸಂಬಂಧ ವರದಿ ಕೊಡಲು ಸೂಚಿಸಿದ್ದರು. ಅದರಂತೆ

ದಿ:02.05.2006 ರಂದು ನಾನು ಹಾಗೂ ಚಾಸಾ-7, ಚಾಸಾ-3, ಚಾಸಾ-4 ಮತ್ತು 5 ಹಾಗೂ ಚಾಸಾ-6 ರವರೊಟ್ಟಿಗೆ ಚಿಕ್ಕಕೊಪ್ಪ ಗ್ರಾಮದ ಸರ್ವೆ ನಂ.35 ರ ಸಂಬಂಧ ಸದರಿ ಪ್ರದೇಶಕ್ಕೆ ಭೇಟಿ ಮಾಡಲಾಗಿ ಅಲ್ಲಿ ಪಟ್ಟಾ ಪ್ರದೇಶದ 2 ಎಕರೆ ಜಮೀನಿನಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಗಣಿಗಾರಿಕೆ ಮಾಡಲು 1993-94 ರಲ್ಲಿ ಆದೇಶವಿದ್ದು ಆದರೆ ಸ್ಥಳದ ಪರಿಶೀಲನೆ ಮಾಡಿದಾಗ ಸುಮಾರು 1 ಎಕರೆ 2 ಗುಂಟೆಯಷ್ಟು ಹೆಚ್ಚುವರಿ ಜಾಗವನ್ನು ಅತಿಕ್ರಮ ಮಾಡಿ ಗಣಿಗಾರಿಕೆ ಮಾಡಿ ಅದರ ತ್ಯಾಜ್ಯವನ್ನು ಇರಿಸಿರುವುದು ಕಂಡು ಬಂದಿರುತ್ತದೆ.

ನಂತರ ನಾವುಗಳು ಸದರಿ ಪ್ರದೇಶದ ಸರ್ವೆ ಮಾಡಿ ಒಂದು ಕಚ್ಚಾ ನಕಾಶೆಯನ್ನು ತಯಾರು ಮಾಡಿಕೊಂಡು ಕಚೇರಿಗೆ ಹಿಂದಿರುಗಿ ನಕ್ಷೆಯನ್ನು ತಯಾರು ಮಾಡಿ ವರದಿಯನ್ನು ಒಪ್ಪಿ ಸಿರುತ್ತೇವೆ.

ಸಾಕ್ಷಿಗೆ ಈಗ ಸದರಿ ನಕ್ಷೆಯ ದಾಖಲೆಯನ್ನು ತೋರಿಸಲಾಗಿ, ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ.ಪಿ.1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.1(ಬಿ) ಎಂದು ಈಗ ಗುರುತಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಮೊದಲನೇ ಅಪರ ಸಿಜೆ ಮತ್ತು ಜೆಎಂಎಫ್‌ಸಿ,

ಕನಕಪುರ .